

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ‌ತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **13–05–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ ـ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರ‌ತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರ‌ತ್ ಅಬೂಬಕರ್(ರ)ರ ಖಿಲಾಫತ್ ಕಾಲಘಟ್ಟದಲ್ಲಿ ನಡೆದ ಪಿತೂರಿಗಳ ಎದುರಾಗಿ ನಡೆದ ಕಾರ್ಯಾಚರಣೆಗಳ ಕುರಿತು ಪ್ರಸ್ತಾಪಿಸಲಾಗುತ್ತಿತ್ತು. ಈ ಸಂಬಂಧವಾಗಿ ಹಝ್ರ‌ತ್ ಖಾಲಿದ್ ಬಿನ್ ವಲೀದ್(ರ) ಬುತಾಹ್ ಎಂಬ ಪ್ರದೇಶದ ದಿಕ್ಕಿನಲ್ಲಿ ಮಾಲಿಕ್ ಬಿನ್ ನುವೇರನ ಕಡೆಗೆ ಹೊರಟ ಬಗ್ಗೆಗಿನ ವಿವರಣೆ ಹೀಗಿದೆ: ಮಾಲಿಕ್ ಬಿನ್ ನುವೇರನ ಸಂಬಂಧ ಬನೂ ತಮೀಮಿನ ಒಂದು ಶಾಖೆಯಾದ ಬನೂ ಯರ್‌ಬೂಅ್‌ನೊಂದಿಗೆ ಆಗಿತ್ತು. ಅವನು ಹಿಜರೀ 9ರಲ್ಲಿ ಮದೀನಕ್ಕೆ ಬಂದು ಇಸ್ಲಾಂ ಸ್ವೀಕಾರ ಮಾಡಿದ್ದನು. ಹಝ್ರ‌ತ್ ಪೈಗಂಬರ್(ಸ) ಆತನಿಗೆ ಆತನ ಗೋತ್ರದ ಝಕಾತ್ ವಸೂಲು ಮಾಡುವ ಹುದ್ದೆಯನ್ನು ಕೊಟ್ಟಿದ್ದರು. ಆದರೆ ಹಝ್ರ‌ತ್ ಪೈಗಂಬರ್(ಸ) ನಿಧನರಾಗಿ ಅರೇಬಿಯದಲ್ಲಿ ಧರ್ಮತ್ಯಾಗ ಮತ್ತು ದಂಗೆಯ ಅಲೆಗಳು ಎದ್ದಾಗ ಆತನು ಕೂಡ ಧರ್ಮತ್ಯಾಗಿಗಳಲ್ಲಿ ಒಬ್ಬನಾದನು. ಹಝ್ರ‌ತ್ ಪೈಗಂಬರ್(ಸ) ನಿಧನರಾದ ಸುದ್ದಿ ಆತನಿಗೆ ತಲುಪಿದಾಗ ಆತನು ಖುಶಿ ಮತ್ತು ಸಂತೋಷದ ಹಬ್ಬವನ್ನು ಆಚರಿಸಿದನು. ಝಕಾತ್ ಕಡ್ಡಾಯವೆಂದು ಒಪ್ಪುವುದರೊಂದಿಗೆ ಝಕಾತಿನ ಸಂಪತ್ತನ್ನು ಮುಸ್ಲಿಮರ ಕೇಂದ್ರವಾದ ಮದೀನಕ್ಕೆ ಕಳುಹಿಸಬೇಕೆಂದು ಹೇಳುತ್ತಿದ್ದ ತನ್ನ ಗೋತ್ರದ ಮುಸ್ಲಿಮರನ್ನು ಆತನು ವಧಿಸಿದನು. ಅದೂ ಅಲ್ಲದೆ ಸುಳ್ಳುಪ್ರವಾದಿತ್ವ ವಾದಿಯಾದ ದಂಗೆಗಾರ್ತಿ ಸಜಾಹ್‌ಳ ಜೊತೆಗೆ ಸೇರಿದನು. ಅವಳಾದರೋ ಬಹಳ ದೊಡ್ಡದಾದೊಂದು ಸೈನ್ಯದೊಂದಿಗೆ ಮದೀನದ ಮೇಲೆ ದಾಳಿ ನಡೆಸಲು ಬಯಸುತ್ತಿದ್ದಳು.

ಅರೇಬಿಯದ ಕ್ರೈಸ್ತ ಪಂಡಿತೆಯೂ ಕಣಿಹೇಳುವವಳೂ ಆದ ಉಮ್ಮೆ ಸಾದಿರ್ ಸಜಾಹ್ ಬಿನ್ತ್ ಹಾರಿಸ್ ಎಂಬವಳು ಬನೂ ತಮೀಂ ಗೋತ್ರದವಳಾಗಿದ್ದಳು. ಪ್ರವಾದಿತ್ವದ ವಾದವನ್ನು ಮಾಡಿದ ಕೆಲವರಲ್ಲಿ ಇವಳೂ ಒಬ್ಬಳು. ಅರೇಬಿಯದಲ್ಲಿ ಧರ್ಮತ್ಯಾಗದ ಪಿತೂರಿ ನಡೆಯುವುದಕ್ಕೆ ಮುಂಚಿತವಾಗಿ ಅಥವಾ ಆ ಸಮಯದಲ್ಲಿ ಹೊರಬಂದ ದಂಗೆಗಾರರಾದ ಗೋತ್ರ ಸರದಾರರಲ್ಲಿ ಇವಳೂ ಒಬ್ಬಳಾಗಿದ್ದಳು. ತನ್ನ ಮಹತ್ತಾದ ಸೈನ್ಯದ ಜೊತೆಗೆ ಥಟ್ಟನೆ ಬನೂ ತಮೀಮಿಗೆ ತಲುಪಿ ತನ್ನ ನುಬುವ್ವತ್ ವಾದದ ಘೋಷಣೆ ಮಾಡುತ್ತಾ ತನ್ನನ್ನು ನಂಬಲಿಕ್ಕಾಗಿ ಆಹ್ವಾನ ನೀಡಬೇಕೆಂಬ ಉದ್ದೇಶ ಹೊಂದಿದ್ದಳು. ಸಂಪೂರ್ಣ ಗೋತ್ರ ಅವಳ ಜೊತೆಗೆ ಆಗುವುದು ಮತ್ತು ಉಯೈನನ ಬಗ್ಗೆ ಹೇಳಿದ ಹಾಗೆಯೇ ಅವಳ ಬಗ್ಗೆಯೂ 'ಬನೂ ಯರ್‌ಬೂಅ್‌ನ ನಬಿ ಖುರೈಶಿನ ನಬಿಗಿಂತ ಉತ್ತಮ' ಎಂದು ಜನರು ಹೇಳುವರು ಎಂದು ಅವಳು ಯೋಚಿಸಿದ್ದಳು. ಏಕೆಂದರೆ, ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ನಿಧನರಾಗಿರುವರು. ಆದರೆ ಸಜಾಹ್ ಜೀವಂತವಾಗಿರುವಳು.

ಸಜಾಹ್ ತನ್ನ ಸೈನ್ಯದ ಜೊತೆಗೆ ಬನೂ ಯರ್‌ಬೂಅ್‌ನ ಗಡಿಗೆ ತಲುಪಿ ಅಲ್ಲಿ ತಂಗಿದಳು. ಅಲ್ಲಿನ ಗೋತ್ರದ ಸರದಾರನಾದ ಮಾಲಿಕ್ ಬಿನ್ ನುವೇರನನ್ನು ಕರೆದು ಮೈತ್ರಿ ಸಂಧಾನ ಮಾಡಿಕೊಳ್ಳಲು ಮತ್ತು ಮದೀನದ ಮೇಲೆ ದಾಳಿ ನಡೆಸಲು ತನ್ನ ಜೊತೆಗೆ ಬರುವಂತೆ ಆಮಂತ್ರಿಸಿದಳು. ಮಾಲಿಕ್ ಸಂಧಾನದ ಆಹ್ವಾನವನ್ನು ಅಂಗೀಕರಿಸಿದನು. ಆದರೆ ಮದೀನದ ಮೇಲೆ ದಾಳಿ ನಡೆಸುವುದರಿಂದ ಬಿಟ್ಟುನಿಲ್ಲಲು ಅವಳಿಗೆ ಸಲಹೆ ಕೊಟ್ಟನು. ಮದೀನಕ್ಕೆ ತಲುಪಿ ಅಬೂಬಕರ್(ರ)ರ ಸೈನ್ಯವನ್ನು ಎದುರಿಸುವುದಕ್ಕಿಂತ ಮೊದಲು ಸ್ವಂತ ಗೋತ್ರದಲ್ಲಿರುವ ಎದುರಾಳಿಗಳನ್ನು ಕೊನೆಗೊಳಿಸಬೇಕೆಂದು ಅವನು ಹೇಳಿದನು. ಮಾಲಿಕ್‌ನ ಈ ಸಲಹೆಯನ್ನು ಇಷ್ಟಪಡುತ್ತಾ ಅವಳು ಇತರ ಸರದಾರರನ್ನು ಕೂಡ ಮೈತ್ರಿ ಸಂಧಾನ ಮಾಡಿಕೊಳ್ಳಲು ಆಹ್ವಾನಿಸಿದಳು. ಆದರೆ ವಕೀಅ್ ಹೊರತುಪಡಿಸಿ ಇತರ ಯಾರೂ ಈ ಆಹ್ವಾನವನ್ನು ಸ್ವೀಕಾರ ಮಾಡಲಿಲ್ಲ. ಆಗ ಮಾಲಿಕ್, ವಕೀಅ್ ಮತ್ತು ತನ್ನ ಸೈನ್ಯದೊಂದಿಗೆ ಸಜಾಹ್ ಇತರ ಸರದಾರರ ಮೇಲೆ ದಾಳಿ ನಡೆಸಿದಳು. ಘೋರವಾದ ಯುದ್ಧ ನಡೆಯಿತು. ಅದರಲ್ಲಿ ಎರಡು ಪಕ್ಷಗಳಿಂದಲೂ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಜನರು ಕೊಲ್ಲಲ್ಪಟ್ಟರು ಮತ್ತು ಒಂದೇ ಗೋತ್ರದವರು ಪರಸ್ಪರರನ್ನು ಬಂಧಿಸಿದರು. ಈ ಆಹ್ವಾನವನ್ನು ಸ್ವೀಕಾರ ಮಾಡಿಕೊಂಡು ನಾವು ಬಹಳ ದೊಡ್ಡದಾದೊಂದು ತಪ್ಪನ್ನು ಮಾಡಿರುವೆವು ಎಂದು ಮಾಲಿಕ್ ಮತ್ತು ವಕೀಅ್‌ರಿಗೆ ಕೆಲವೇ ಕಾಲದೊಳಗೆ ಗೊತ್ತಾದಾಗ ಅವರು ಇತರ ಸರದಾರರ ಜೊತೆಗೆ ಮೈತ್ರಿ ಸಂಧಾನ ಮಾಡಿಕೊಂಡು ಪರಸ್ಪರ ಬಂಧಿಸಿದ ಕೈದಿಗಳನ್ನು ಮರಳಿಸಿದರು.

ತನ್ನ ಯೋಜನೆಯ ಉದ್ದೇಶಗಳು ಫಲಕಾರಿಯಾಗದೇ ಹೋದಾಗ ಸಜಾಹ್ ಬನೂ ತಮೀಮ್ ಗೋತ್ರದಿಂದ ಮದೀನದ ಕಡೆಗೆ ಹೊರಟಳು. ಅಲ್ಲಿಗೆ ತಲುಪಿ ಔಸ್ ಬಿನ್ ಖುಝೈಮದೊಂದಿಗೆ ಮುಖಾಮುಖಿಯಾದಳು. ಅದರಲ್ಲೂ ಅವಳಿಗೆ ಸೋಲುಂಟಾಯಿತು. ಮದೀನದ ಕಡೆಗೆ ಹೋಗುವುದಿಲ್ಲ ಎಂಬ ದೃಢನಿರ್ಧಾರವನ್ನು ಅವಳು ಮಾಡಬೇಕೆಂಬ ಶರತ್ತಿನೊಂದಿಗೆ ಔಸ್ ಅವಳನ್ನು ಮರಳಿಸಿದರು. ಮದೀನದ ಕಡೆಗೆ ಹೋಗುವ ಮಾರ್ಗ ಮುಚ್ಚಲ್ಪಟ್ಟಿರುವುದನ್ನು ನೋಡಿದಾಗ ಸಜಾಹ್‌ನ ಸೇನಾಧಿಪತಿಗಳು ಚಿಂತಿತರಾದರು ಮತ್ತು ಮುಂದೆ ಏನು ಮಾಡಬೇಕೆಂಬ ಪ್ರಶ್ನೆಯನ್ನು ಸಜಾಹ್‌ಳೊಡನೆ ಅವರು ಕೇಳಿದರು. ಅವಳು ಅದಕ್ಕೆ ಉತ್ತರವಾಗಿ ದಿವ್ಯವಾಣಿ ಎಂಬಂತೆ ಒಂದು ಕಾವ್ಯಾತ್ಮಕ ಸಾಲನ್ನು ರಚಿಸಿ ಹೀಗೆ ಉತ್ತರಿಸಿದಳು: ಮದೀನಕ್ಕೆ ಹೋಗುವ ಮಾರ್ಗ ತಡೆಯಲ್ಪಟ್ಟರೆ ಚಿಂತಿಸಬೇಕಾಗಿಲ್ಲ. ಯಮಾಮದ ಕಡೆಗೆ ಹೋಗಿರಿ. ಸಜಾಹ್ ತನ್ನ ಸೈನ್ಯದೊಂದಿಗೆ

ಯಮಾಮಗೆ ತಲುಪಿದಾಗ ಮುಸೈಲಿಮ ಬಹಳ ಚಿಂತಿತನಾದನು. ಸಜಾಹ್‌ಳ ಸೈನ್ಯದೊಂದಿಗೆ ಯುದ್ಧ ಮಾಡಿದಲ್ಲಿ ಅವನ ಶಕ್ತಿ ದುರ್ಬಲಗೊಳ್ಳುವುದು, ಇದರಿಂದ ಇಸ್ಲಾಮಿನ ಸೈನ್ಯ ಕೂಡ ಅವನ ಸೈನ್ಯದ ಮೇಲೆ ಧಾಳಿ ನಡೆಸುವುದು ಹಾಗೂ ಇತರ ಗೋತ್ರಗಳು ಕೂಡ ಅವನನ್ನು ಅನುಸರಿಸುವುದನ್ನು ನಿರಾಕರಿಸುವರು ಎಂದು ಅವನು ಯೋಚಿಸಿದನು. ಹೀಗೆ ಯೋಚಿಸುತ್ತಾ ಅವನು ಸಜಾಹ್‌ಳೊಡನೆ ಮೈತ್ರಿ ಸಂಧಾನ ಮಾಡಲು ನಿರ್ಧರಿಸಿದನು. ಮೊದಲು ಅವಳಿಗೆ ಉಡುಗೊರೆ, ಕಾಣಿಕೆ ಇತ್ಯಾದಿಗಳನ್ನು ಕಳುಹಿಸಿದನು. ಅನಂತರ ಸ್ವತಃ ಅವಳನ್ನು ಭೇಟಿಯಾಗಲು ಬಯಸುವುದಾಗಿ ಅವಳಿಗೆ ಸಂದೇಶವನ್ನು ಕಳುಹಿಸಿದನು. ಬಂದು ಭೇಟಿಯಾಗಲು ಅವಳು ಅವನಿಗೆ ಅನುಮತಿ ಕೊಟ್ಟಳು.

ಮುಸೈಲಿಮ ಬನೂ ಹನೀಫ಼ದ ನಲ್ವತ್ತು ವ್ಯಕ್ತಿಗಳ ಜೊತೆಗೆ ಅವಳ ಬಳಿಗೆ ಹೋದನು. ಒಬ್ಬಂಟಿಯಾಗಿ ಅವಳೊಂದಿಗೆ ಮಾತುಕತೆ ನಡೆಸಿದನು. ಸುಜಾಹ್‌ಳನ್ನು ಪೂರ್ತಿಯಾಗಿ ತನ್ನ ನಿಯಂತ್ರಣದಲ್ಲಿ ತರಲು ಮತ್ತು ಅವಳನ್ನು ತನ್ನವಳಾಗಿ ಮಾಡಿಕೊಳ್ಳಲು ಮುಸೈಲಿಮ ಹೀಗೆ ಸಲಹೆ ಕೊಟ್ಟನು: ನಾವಿಬ್ಬರೂ ನಮ್ಮ ಪ್ರವಾದಿತ್ವವನ್ನು ಒಟ್ಟಾಗಿಸೋಣ ಮತ್ತು ಪರಸ್ಪರ ವಿವಾಹ ಮಾಡಿಕೊಳ್ಳೋಣ. ಅವಳು ಈ ಸಲಹೆಯನ್ನು ಅಂಗೀಕರಿಸಿದಳು. ಮೂರು ದಿನಗಳ ಕಾಲ ಅವನ ಕ್ಯಾಂಪಿನಲ್ಲಿ ತಂಗಿದ ನಂತರ ಅವಳು ತನ್ನ ಸೈನ್ಯಕ್ಕೆ ಮರಳಿ ಹೋಗಿ, ತಾನು ಮುಸೈಲಿಮನನ್ನು ಸತ್ಯದಲ್ಲಿ ಕಂಡೆ ಎಂದೂ ಆದ್ದರಿಂದ ಅವನೊಂದಿಗೆ ವಿವಾಹ ಮಾಡಿಕೊಂಡೆ ಎಂದೂ ತನ್ನ ಸಂಗಡಿಗರೊಡನೆ ಹೇಳಿದಳು. ಸ್ವಲ್ಪ ಮಹರ್ ಧನವನ್ನು ಕೂಡ ನಿಶ್ಚಯಿಸಿಕೊಂಡಿದ್ದೀರಿ ತಾನೆ? ಎಂದು ಜನರು ಅವಳೊಡನೆ ಕೇಳಿದರು. ಮಹರ್ ನಿಶ್ಚಯಿಸಿಲ್ಲ ಎಂದು ಅವಳು ಹೇಳಿದಳು. ಜನರು ಹೀಗೆ ಸಲಹೆ ಕೊಟ್ಟರು: ಮರಳಿ ಹೋಗಿ ಮಹರ್ ನಿಶ್ಚಯಿಸಿರಿ. ಏಕೆಂದರೆ ನಿಮ್ಮಂತಹ ಮಹಿಳೆಯನ್ನು ಮಹರ್ ನೀಡದೇ ವಿವಾಹ ಮಾಡುವುದು ಸರಿಯಲ್ಲ. ಹಾಗೆ ಅವಳು ಅವನ ಬಳಿಗೆ ಹೋದಳು. ತಾನು ಬಂದ ಉದ್ದೇಶವನ್ನು ಮುಸೈಲಿಮನೊಡನೆ ಹೇಳಿಕೊಂಡಳು. ಆಗ ಮುಸೈಲಿಮ ಅವಳಿಗಾಗಿ ಇಶಾ ಮತ್ತು ಫಜ್ರ್ ನಮಾಝ್‌ಗಳನ್ನು ಕಡಿಮೆಗೊಳಿಸಿದನು ಮತ್ತು ಅವುಗಳನ್ನು ಕೊನೆಗೊಳಿಸಿದನು. ಅದೇ ರೀತಿಯಲ್ಲಿ ಯಮಾಮದ ಭೂಪ್ರದೇಶದಿಂದ ಲಭಿಸುವ ತೆರಿಗೆಯ ಅರ್ಧ ಆದಾಯ ಅವಳಿಗೆ ಕಳುಹಿಸಲಾಗುವುದು ಎಂದು ಇತ್ಯರ್ಥವಾಯಿತು. ಅನಂತರ ಅವಳು ಬನೂ ತಗ್‌ಲಬ್‌ನಲ್ಲೇ ತಂಗಿದಳು, ನಂತರ ಪಶ್ಚಾತ್ತಾಪ ಮಾಡಿಕೊಂಡು ಇಸ್ಲಾಂ ಧರ್ಮ ಸ್ವೀಕಾರ ಮಾಡಿದಳು. ಒಂದು ಬರಗಾಲದ ವರ್ಷದಲ್ಲಿ ಅಮೀರ್ ಮುಆವಿಯ ಅವಳನ್ನು ಅವಳ ಕೋಮಿನೊಂದಿಗೆ ಬನೂ ತಮೀಮಿಗೆ ಕಳುಹಿಸಿದರು. ಅಲ್ಲಿ ಅವಳು ತನ್ನ ಮರಣದ ತನಕ ಮುಸ್ಲಿಮಳಾದ ಸ್ಥಿತಿಯಲ್ಲೇ ಜೀವಿಸಿದ್ದಳು.

ಹಝ್ರತ್ ಅಬೂಬಕರ್(ರ) ಹಝ್ರತ್ ಖಾಲಿದ್ ಬಿನ್ ವಲೀದ್‌ರಿಗೆ, ತುಲೈಹ ಅಸದಿಗೆ ಸಂಬಂಧಿಸಿದ ಕೆಲಸ ಮುಗಿದ ನಂತರ ಬುತಾಹ್‌ದಲ್ಲಿ ತಂಗಿರುವ ಮಾಲಿಕ್ ಬಿನ್ ನುವೇರನನ್ನು ಎದುರಿಸಲು ಹೋಗಬೇಕೆಂದು ಆಜ್ಞಾಪಿಸಿದ್ದರು. ಹಝ್ರತ್ ಖಾಲಿದ್(ರ) ಅಲ್ಲಿಗೆ ಹೋದಾಗ ಅಲ್ಲಿ ಯಾರನ್ನೂ ಕಾಣದಿದ್ದಾಗ ಅವರು ಅನೇಕ ಸೇನಾ ತುಕಡಿಯನ್ನು ಬೇರೆ ಬೇರೆ ದಿಕ್ಕುಗಳಿಗೆ ಕಳುಹಿಸಿದರು. ತಲುಪುವ ಸ್ಥಳದಲ್ಲಿ ಮೊದಲು ಇಸ್ಲಾಮಿನ ಕಡೆಗೆ ಆಮಂತ್ರಣ ನೀಡಬೇಕೆಂದೂ ಸ್ವೀಕಾರ ಮಾಡದಿದ್ದರೆ ಅವರನ್ನು ಬಂಧಿಸಲು ಮತ್ತು ಹೋರಾಡಲು ಬರುವವರನ್ನು ವಧಿಸಲು ಸೈನ್ಯಕ್ಕೆ ಆದೇಶ ನೀಡಿದರು. ಅವುಗಳಲ್ಲಿ ಒಂದು ಸೈನಿಕ ತುಕಡಿ, ಮಾಲಿಕ್ ಬಿನ್ ನುವೈರನನ್ನೂ ಆತನ ಜೊತೆಗಿದ್ದ ಬನೂ ಯರ್‌ಬೂಅ್‌ನ ಕೆಲವು ಜನರನ್ನೂ ಬಂಧಿಸಿ ತಂದರು.

**ಮಾಲಿಕ್ ಬಿನ್ ನುವೈರನನ್ನು ವಧಿಸಿದ ಕುರಿತು ಎರಡು ತರದ ವರದಿಗಳು ಬಂದಿರುವುದರ ಬಗ್ಗೆ ಪ್ರಸ್ತಾಪ.**

ಒಂದು ವರದಿ ಪ್ರಕಾರ: ಆ ರಾತ್ರಿ ತುಂಬಾ ಚಳಿಯಿತ್ತು. ಚಳಿ ಹೆಚ್ಚಾಗಲು ಶುರುವಾದಾಗ **“ಅದ್‌ಫಿಊ ಅಸ್‌ರಾಕುಂ”** ಎಂದು ಘೋಷಿಸಲು ಹಝ್ರತ್ ಖಾಲಿದ್(ರ) ಆದೇಶ ನೀಡಿದರು. ಎಂದರೆ ಕೈದಿಗಳನ್ನು ಚಳಿಯಿಂದ ಸಂರಕ್ಷಿಸುವ ಏರ್ಪಾಡು ಮಾಡಿರಿ. ಆದರೆ ಬನೂ ಕನ್‌ಆನದ ನುಡಿಗಟ್ಟು ಪ್ರಕಾರ ಅದರ ಅರ್ಥ ಕೈದಿಗಳನ್ನು ಕೊಲ್ಲು ಎಂದಾಗಿತ್ತು. ಈ ವಾಕ್ಯವನ್ನು ಸ್ಥಳೀಯ ಭಾಷೆಯ ಪ್ರಕಾರ ಅರ್ಥೈಸಿಕೊಂಡು ಸೈನಿಕರು ಕೈದಿಗಳನ್ನು ವಧಿಸಿದರು. ಗದ್ದಲ ಕೇಳಿಬಂದಾಗ ಹಝ್ರತ್ ಖಾಲಿದ್ ಬಿನ್ ವಲೀದ್(ರ) ತನ್ನ ಡೇರೆಯಿಂದ ಹೊರಗೆ ಬಂದರು. ಆದರೆ ಅಷ್ಟರಲ್ಲಿ ಸಿಪಾಯಿಗಳು ಎಲ್ಲ ಕೈದಿಗಳನ್ನು ಕೊಂದುಹಾಕಿದ್ದರು. ಈಗ ಏನೂ ಮಾಡಲು ಸಾಧ್ಯವಿರಲಿಲ್ಲ. ಖಾಲಿದ್(ರ) ಹೇಳಿದರು: ಅಲ್ಲಾಹನು ಯಾವ ಕೆಲಸವನ್ನು ಮಾಡಲು ಬಯಸುತ್ತಾನೋ ಅದು ಆಗಿಯೇ ಬಿಡುತ್ತದೆ.

ಮತ್ತೊಂದು ವರದಿ ಹೀಗಿದೆ: ಮಾಲಿಕ್ ಬಿನ್ ನುವೈರನನ್ನು ಹಝ್ರತ್ ಖಾಲಿದ್(ರ) ತನ್ನ ಬಳಿಗೆ ಕರೆದರು. ಸಜಾಹ್‌ಳೊಡನೆ ಸೇರಿಕೊಂಡು ಝಕಾತ್ ತಡೆದದ್ದಕ್ಕೆ ಅವನನ್ನು ವಿಚಾರಿಸಿದರು. ಝಕಾತ್ ನಮಾಝಿನ ಜೊತೆಗಾರನೆಂದು ನಿನಗೆ ಗೊತ್ತಿಲ್ಲವೇ ಎಂದು ಅವನೊಡನೆ ಕೇಳಿದರು. ಮಾಲಿಕ್ ಹೇಳಿದನು: ನಿಮ್ಮ ಸಾಹಿಬ್‌ರ ಅಭಿಪ್ರಾಯ ಇದೇ ಆಗಿತ್ತು. ಎಂದರೆ ರಸೂಲುಲ್ಲಾಹ್(ಸ)ರನ್ನು ಸಾಹಿಬ್ ಅಥವಾ ಸಂಗಡಿಗ ಎಂಬುವುದಾಗಿ ಅವನು ಕರೆದನು. ಹಝ್ರತ್ ಖಾಲಿದ್(ರ) ಕೇಳಿದರು: ಅವರು ನಮ್ಮ ಸಾಹಿಬ್ ಮಾತ್ರವೇ? ನಿನ್ನ ಸಾಹಿಬ್ ಅಲ್ಲವೇ? ಅನಂತರ ಹಝ್ರತ್ ಝಿರಾರ್(ರ)ರೊಡನೆ ಅವನ ತಲೆಯನ್ನು ಕಡಿದುಹಾಕಲು ಹಝ್ರತ್ ಖಾಲಿದ್(ರ) ಆದೇಶಿಸಿದರು.

ತವಾರೀಖ್‌ರ ವರದಿ ಪ್ರಕಾರ, ಈ ಸಂಬಂಧವಾಗಿ ಅಬೂಖತ್ತಾದ(ರ) ಹಝ್ರತ್ ಖಾಲಿದ್(ರ)ರೊಡನೆ ಮಾತುಕತೆ ನಡೆಸಿದರು. ಇಬ್ಬರ ನಡುವೆ ಸಂವಾದ ನಡೆಯಿತು. ಹಝ್ರತ್ ಅಬೂಖತ್ತಾದ(ರ) ಹಝ್ರತ್ ಖಾಲಿದ್‌ರೊಂದಿಗೆ ಭಿನ್ನಾಭಿಪ್ರಾಯ ಹೊಂದಿಕೊಂಡು ಸೈನ್ಯವನ್ನು ಬಿಟ್ಟು ಹಝ್ರತ್ ಅಬೂಬಕರ್(ರ)ರ ಬಳಿಗೆ ಹೋದರು. ಮಾಲಿಕ್ ಬಿನ್ ನುವೈರ ಮುಸ್ಲಿಮನಾದ ನಂತರವೂ ಖಾಲಿದ್ ಅವನನ್ನು ವಧಿಸಿದರು ಎಂದು ಅವರು ದೂರುಕೊಟ್ಟರು. ಸೇನಾಧಿಪತಿಯಾದ ಹಝ್ರತ್ ಖಾಲಿದ್‌ರ ಅನುಮತಿಯಿಲ್ಲದೇ ಸೈನ್ಯವನ್ನು ಬಿಟ್ಟುಬಂದದ್ದಕ್ಕೆ ಹಝ್ರತ್ ಅಬೂಬಕರ್(ರ) ಅಬೂಖತ್ತಾದರೊಡನೆ ಬಹಳ ಕೋಪಗೊಂಡರು.

ತಾರೀಖ್ ತಬರಿಯಲ್ಲಿ ಇದರ ವಿವರಣೆ ಹೀಗೆ ಬಂದಿದೆ: ಹಝ್ರತ್ ಉಮರ್(ರ) ಹಝ್ರತ್ ಅಬೂಬಕರ್(ರ)ರ ಸನ್ನಿಧಿಯಲ್ಲಿ ಹೀಗೆ ಹೇಳಿದರು: ಖಾಲಿದ್(ರ) ಒಬ್ಬ ಮುಸ್ಲಿಮನ ಕೊಲೆಗೆ ಕಾರಣಕರ್ತನಾಗಿರುವನು. ಇದು ಸಾಬೀತಾಗದಿದ್ದರೂ, ಅವರನ್ನು ಬಂಧಿಸುವುದಕ್ಕೆ ಬೇಕಾದಷ್ಟು ಪುರಾವೆಯಂತು ಇದೆ.

ಹತ್ಯೆಯಂತು ಖಂಡಿತ ನಡೆದಿದೆ ಎಂದು ಹೇಳಿದರು. ಈ ವಿಷಯದಲ್ಲಿ ಹಝ್ರತ್ ಉಮರ್(ರ) ಬಹಳ ಒತ್ತಾಯಪಡಿಸಿದರು. ಆದರೆ ಹಝ್ರತ್ ಅಬೂಬಕರ್(ರ) ತನ್ನ ಅಧಿಕಾರಿಗಳನ್ನು ಮತ್ತು ಸೇನಾಧಿಪತಿಗಳನ್ನು ಎಂದಿಗೂ ಬಂಧಿಸುತ್ತಿರಲಿಲ್ಲ. ಆದ್ದರಿಂದ ಅವರು ಹೇಳಿದರು: ಎಲೈ ಉಮರ್, ಈ ವಿಷಯದಲ್ಲಿ ಸುಮ್ಮನಿರಿ. ಇದು ಖ಼ಾಲಿದ್ ಬಿನ್ ವಲೀದ್(ರ)ರಿಂದ ಅರಿಯದೇ ಆದ ತಪ್ಪಾಗಿದೆ. ನೀವು ಅವರ ಬಗ್ಗೆ ಖಂಡಿತ ಏನೂ ಕೇಳಬೇಡಿ ಎಂದು ಹೇಳಿದರು. ಮಾಲಿಕ್‌ನ ಪರಿಹಾರಧನವನ್ನು ಹಝ್ರತ್ ಅಬೂಬಕರ್(ರ) ಕೊಟ್ಟರು. ಹಝ್ರತ್ ಅಬೂಬಕರ್(ರ) ಪತ್ರ ಬರೆದು ಹಝ್ರತ್ ಖ಼ಾಲಿದ್ ಬಿನ್ ವಲೀದ್(ರ)ರೊಡನೆ ಬರಲು ಹೇಳಿದರು. ಅವರು ಬಂದು ಈ ಘಟನೆಯ ಪೂರ್ತಿ ವಿವರಣೆಯನ್ನು ಹೇಳಿಕೊಂಡು ಕ್ಷಮೆ ಯಾಚಿಸಿದರು. ಹಝ್ರತ್ ಅಬೂಬಕರ್(ರ) ಅವರ ಕ್ಷಮೆಯಾಚನೆಯನ್ನು ಸ್ವೀಕಾರ ಮಾಡಿದರು.

ಶರಹ್ ಮುಸ್ಲಿಮ್‌ನಲ್ಲಿ ಇಮಾಂ ನವವಿ(ರಹ್) ಹೇಳುತ್ತಾರೆ: ಹಝ್ರತ್ ಅಬೂಬಕರ್(ರ) ಮಾಲಿಕ್ ಬಿನ್ ನುವೈರನ ಕುರಿತು ಸರಿಯಾಗಿ ತನಿಖೆ ನಡೆಸಿದರು. ಖ಼ಾಲಿದ್ ಬಿನ್ ವಲೀದ್(ರ) ಈ ಹತ್ಯೆ ಆರೋಪದಿಂದ ಮುಕ್ತರು ಎಂದು ಗೊತ್ತಾಯಿತು. ಹಝ್ರತ್ ಅಬೂಬಕರ್(ರ) ಈ ಸಂಬಂಧವಾಗಿ ವಿಷಯಗಳ ಸತ್ಯಾಂಶಗಳ ಕುರಿತು ಖ಼ಲೀಫ ಎಂಬ ನಿಟ್ಟಿನಲ್ಲಿ ಇತರರಿಗಿಂತ ಹೆಚ್ಚು ತಿಳಿದಿದ್ದರು ಮತ್ತು ಸೂಕ್ಷ್ಮವಾದ ಗಮನವಿರಿಸಿಕೊಂಡಿದ್ದರು. ಮಾತ್ರವಲ್ಲ ಅವರ ಈಮಾನ್ ಸಹ ಎಲ್ಲರಿಗಿಂತ ಮೇಲಾಗಿತ್ತು. ಖ಼ಾಲಿದ್(ರ)ರೊಂದಿಗೆ ವರ್ತನೆಯಲ್ಲಿ ಹಝ್ರತ್ ಅಬೂಬಕರ್(ರ) ಹಝ್ರತ್ ಪೈಗಂಬರ್(ಸ)ರನ್ನು ಅನುಕರಿಸುತ್ತಿದ್ದರು.

ಹಝ್ರತ್ ಖ಼ಾಲಿದ್ ಬಿನ್ ವಲೀದ್(ರ)ರ ಕುರಿತು ಮತ್ತೊಂದು ಆರೋಪವೂ ಇದೆ. ಅವರು ಕೊಲ್ಲಲ್ಪಟ್ಟ ವ್ಯಕ್ತಿಯ ಪತ್ನಿಯಾದ ಉಮ್ಮೇ ತಮೀಂ ಲೈಲ ಬಿನ್ತ್ ಮಿನ್‌ಹಾಲ್‌ರೊಂದಿಗೆ ಯುದ್ಧದ ವೇಳೆ ವಿವಾಹ ಮಾಡಿದರು ಮತ್ತು ಇದ್ದಃ ಕಾಲಾವಧಿ ಮುಗಿಯಲು ಕೂಡ ಕಾಯಲಿಲ್ಲ. (ಹಝ್ರತ್ ಶಾಹ್ ಅಬ್ದುಲ್ ಅಝೀಝ್ ದಹ್‌ಲವಿಯ ಉಲ್ಲೇಖದ ಪರಾಮರ್ಶೆ ಮಾಡುತ್ತಾ ಈ ಆರೋಪಕ್ಕೆ ಹುಝೂರ್ ಹೀಗೆ ಉತ್ತರ ನೀಡಿದರು:) ಸತ್ಯದಲ್ಲಿ ಇದು ಕಟ್ಟುಕಥೆಯಾಗಿದೆ. ಮಾಲಿಕ್ ಬಿನ್ ನುವೈರ ಆ ಮಹಿಳೆಯನ್ನು ಬಹಳಷ್ಟು ಕಾಲ ಹಿಂದೆಯೇ ತಲಾಖ್ ನೀಡಿದ್ದನು. ಜಾಹಿಲಿಯ್ಯ ಕಾಲದ ರೂಢಿಯಂತೆ ಅವಳನ್ನು ಅವನು ಮನೆಯಲ್ಲೇ ಇರಿಸಿಕೊಂಡಿದ್ದನು. ಜಾಹಿಲಿಯ್ಯ ಕಾಲದ ಈ ಸಂಪ್ರದಾಯವನ್ನು ಮುರಿಯಲಿಕ್ಕಾಗಿಯೇ **"ವಇಧ಼ಾ ತಲ್ಲಖ್‌ತುಮುನ್ನಿಸಾಅ ಫಬಲಗ್‌ನ ಅಜಲಹುನ್ನ ಫಲಾ ತಅ್‌ಝುಲೂಹುನ್ನ"** ಎಂಬ ಪವಿತ್ರ ಖುರ್‌ಆನಿನ ವಚನ ಅವತೀರ್ಣಗೊಂಡಿತ್ತು. ಎಂದರೆ, "ನೀವು ಸ್ತ್ರೀಯರಿಗೆ ತಲಾಖ್ ಹೇಳಿ ಅವರು ತಮ್ಮ 'ಇದ್ದಃ' ಕಾಲವನ್ನು ಪೂರ್ಣಗೊಳಿಸಿದರೆ, ನೀವು ಅವರನ್ನು ತಡೆಯಬಾರದು." ಆದ್ದರಿಂದ ಆ ಮಹಿಳೆಯ ಇದ್ದಃ ಕಾಲಾವಧಿಯು ಬಹಳ ಹಿಂದೆಯೇ ಪೂರ್ಣಗೊಂಡಿತು ಮತ್ತು ಅವಳನ್ನು ನಿಕಾಹ್ ಮಾಡುವುದು ಅನುಮತನೀಯವಾಗಿತ್ತು. ಏಕೆಂದರೆ ಅವನು ತಲಾಖ್ ನೀಡಿ ಅವಳನ್ನು ತನ್ನ ಮನೆಯಲ್ಲಿ ಇರಿಸಿಕೊಂಡಿದ್ದನು.

ಹಝ್ರತ್ ಖ಼ಾಲಿದ್ ಬಿನ್ ವಲೀದ್(ರ) ಬನೂ ಹನೀಫರನ್ನು ಎದುರಿಸುವ ಉದ್ದೇಶದಿಂದ ಯಮಾಮದ ಕಡೆಗೆ ಹೊರಟ ಬಗ್ಗೆ ಹೀಗೆ ವರದಿಯಿದೆ: ಅಸದ್, ಗ಼ತ್‌ಫಾನ್ ಮತ್ತು ಮಾಲಿಕ್ ಬಿನ್ ನುವೈರ ಮುಂತಾದವರಿಗೆ ಸಂಬಂಧಿಸಿದ ಕೆಲಸ ಮುಗಿದ ನಂತರ ಯಮಾಮದ ಕಡೆಗೆ ಹೋಗಬೇಕೆಂದು ಹಝ್ರತ್ ಖ಼ಾಲಿದ್‌ರೊಡನೆ ಹಝ್ರತ್ ಅಬೂಬಕರ್(ರ) ಬಹಳ ತಾಕೀತಾಗಿ ಆದೇಶ ನೀಡಿದ್ದರು.

(ಶರೀಕ್ ಬಿನ್ ಅಬ್‌ದರ ವರದಿಗೆ ಸಂಬಂಧಿಸಿ ಸಂಕ್ಷೇಪವಾದ ವಿವರಣೆ ನೀಡಿದ ನಂತರ, ಯಮಾಮ ಯುದ್ಧದ ವಿವರಣೆ ಮುಂದಿನ ಬಾರಿ ಪ್ರಸ್ತಾಪಿಸಲಾಗುವುದು ಎಂದು ಹುಝೂರ್ ಖುತ್ಬದ ಕೊನೆಯಲ್ಲಿ ಹೇಳಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ، وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ○ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis***(atba)

*At, Masjid Mubarak, Islamabad, Tilford, UK, On 13-05-2022*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon